ಉ. ಬಿಡಿಭಾಗ ಕಳುವಿನ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿವರ ನೀಡುವುದು;

ಊ. ಮಾರಾಟದ ನಂತರ ಗಿರಣಿ ಕಾರ್ಮಿಕರಿಗೆ, ಮಾರಾಟ ಹಣದಲ್ಲಿ ಎಷ್ಟು ಶೇಕಡಾ ಹಣವನ್ನು ನೀಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಹೌದು

ಆ. ಮಾರಾಟ ಮಾಡಲು ಟೆಂಡರ್‌ಗಳನ್ನು ಕರೆಯಲಾಗಿದೆ. ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಟೆಕ್ಸಾಸ್ ತಾಂತ್ರಿಕ ಸಂಸ್ಥೆಯಿಂದ ಗಿರಣಿಯ ಆಸ್ತಿಪಾಸ್ತಿಗಳ ಮೌಲ್ಯಮಾಪನ ಮಾಡಿಸಲಾಗಿದೆ. ಅದರ ಮೌಲ್ಯ ರೂ. 316.40 ಲಕ್ಷಗಳೆಂದು ನಿಗದಿಪಡಿಸಿರುತ್ತಾರೆ.

ಇ. ಇಲ್ಲ

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಗಿರಣಿಯ ಆಸ್ತಿಪಾಸ್ತಿಗಳನ್ನು ಮಾರಾಟ ಮಾಡಿದ ನಂತರ ಸರ್ಕಾರದಿಂದ ಅನುಮೋದನೆ ಪಡೆದಿರುವ ಆದತ್ಯಾಪಟ್ಟಿಯ ಪ್ರಕಾರ ಮತ್ತು ಸಹಕಾರ ಸಂಘಗಳ ನಿಯಮ 33ರನ್ನು ಓದಿಕೊಂಡು ಹಾಗೂ ಸಂಸ್ಥೆ ನಿಯಮ ಮತ್ತು ಬೈಲಾಗಳನ್ವಯ ವಿತರಿಸಲಾಗುವುದು.

ಬಾಗಲಕೋಟೆಯರುವ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನಲ್ಲಿಟ್ಟಿರುವ ಠೇವಣಿ

1875(2303): ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾಗಲಕೋಟೆಯಲ್ಲಿರುವ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ಗ್ರಾಹಕರು ಇಟ್ಟಿರುವ ಠೇವಣಿ ಹಣವೆಷ್ಟು; ಈ ಠೇವಣಿ ಹಣದಲ್ಲಿ ಗ್ರಾಹಕರಿಗೆ ನೀಡಿರುವ ಸಾಲ ಹಾಗೂ ಹುಬ್ಬಳ್ಳಿಯ ಪ್ರಧಾನ ಕಛೇರಿಯಲ್ಲಿ ಇಟ್ಟಿರುವ ಠೇವಣಿ ಎಷ್ಟು?

ಆ. ಪ್ರಧಾನ ಕಛೇರಿಯಲ್ಲಿಟ್ಟಿದ್ದ ಠೇವಣಿ ಹಣದ ಪೈಕಿ ಧಾರವಾಡದ ಕೆ ಸಿ ಸಿ ಬ್ಯಾಂಕಿನಲ್ಲಿ ಠೇವಣಿ ಇಡಲಾದ ಹಣವೆಷ್ಟು; ಯಾವ ಯಾವ ಠೇವಣಿಗಳಲ್ಲಿ ಹಣ ಇಡಲಾಗಿದೆ? (ವಿವರ ಒದಗಿಸುವುದು)

ಇ. ಬಾಗಲಕೋಟೆ ಶಾಖೆಯಲ್ಲಿ ಠೇವಣಿ ಇಟ್ಟಿರುವ ಗ್ರಾಹಕರು ಹಣ ವಾಪಸ್ಸು ಮಾಡುವಂತೆ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಗ್ರಾಹಕರಿಗೆ ಹಣ ವಾಪಸ್ಸು ನೀಡಲು ಧಾರವಾಡದ ಕೆ ಸಿ ಸಿ ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿಯನ್ನು ರದ್ದುಗೊಳಿಸಲು ಹಾಗೂ ಸದರಿ ಹಣವನ್ನು ವರ್ಗಾಯಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ?

ಉ. ಗ್ರಾಹಕರ ರಕ್ಷಣೆಗೆ ಇದುವರೆಗೂ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಬಾಗಲಕೋಟೆಯಲ್ಲಿರುವ ದಿ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ಗ್ರಾಹಕರು ಒಟ್ಟು ರೂ. 352.73 ಲಕ್ಷ ಠೇವಣಿ ಇಟ್ಟಿರುತ್ತಾರೆ. ಈ ಠೇವಣಿ ಹಣದಲ್ಲಿ ಒಟ್ಟು ರೂ. 125.20 ಲಕ್ಷ ಸಾಲ ವಿತರಿಸಿದೆ. ಹಾಗೂ ಹುಬ್ಬಳ್ಳಿ ಪ್ರಧಾನ ಕಚೇರಿಯಲ್ಲಿ ರೂ. 226.53 ಲಕ್ಷ ಠೇವಣಿ ಇರುತ್ತದೆ.

ಅ. ಪ್ರಧಾನ ಕಚೇರಿಯಲ್ಲಿಟ್ಟ ಠೇವಣಿ ಹಣ ರೂ. 226.53 ಲಕ್ಷ ಸೇರಿದಂತೆ 8 ಶಾಖೆಗಳ ಠೇವಣಿ ಒಟ್ಟು ರೂ. 1114.70 ಲಕ್ಷ ಹಣವನ್ನು ಕೆ ಸಿ ಸಿ ಬ್ಯಾಂಕ್ ಧಾರವಾಡದಲ್ಲಿ ಠೇವಣಿ ಇಡಲಾಗಿದೆ. ವಿವರ ಈ ಕೆಳಗಿನಂತಿದೆ.

1. ಚಾಲ್ತಿ ಠೇವಣಿ ರೂ. 110.03 ಲಕ್ಷ
2. ಮುದ್ದತ್ತು ಠೇವಣಿ ರೂ. 1004.57 ಲಕ್ಷ

ರೂ. 1114.70 ಲಕ್ಷ

ಇ. ಹೌದು,

ಈ. ಕೆಸಿಸಿ ಬ್ಯಾಂಕಿನ ಆಡಳಿತಗಾರರಿಗೆ ಸೂಕ್ತ ಕ್ರಮವಿಡಲು ಸೂಚಿಸಿದೆ.

ಉ. ಧಾರವಾಡ ಕೆ.ಸಿ.ಸಿ ಬ್ಯಾಂಕ್‌ನ ಆರ್ಥಿಕ ತೊಂದರೆಯಿಂದಾಗಿ ಸದರಿ ಬ್ಯಾಂಕಿನಲ್ಲಿ ಇಟ್ಟಿದ್ದ ಹಣವನ್ನು ಆರ್ಯ ವೈಶ್ಯ ಸಹಕಾರಿ ಬ್ಯಾಂಕ್ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಕೆಲವು ಸಬಲ ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಡಿಸಿಸಿ ಬ್ಯಾಂಕುಗಳು ಹಾಗೂ ಅಪೆಕ್ಸ್ ಬ್ಯಾಂಕು ಕೆಸಿಸಿ ಬ್ಯಾಂಕಿನ ಸಂಕಷ್ಟದಲ್ಲಿ ನೆರವಾಗಲು ಒತ್ತಾಯತರಲಾಗಿದೆ. ಇದರ ಜೊತೆಗೆ, ಸಾಲ ವಸೂಲಾತಿಯನ್ನು ಉತ್ತಮ ಪಡಿಸಿ ಗ್ರಾಹಕರ ಮತ್ತು ಬ್ಯಾಂಕಿನ ರಕ್ಷಣೆಯನ್ನು ಕಾಯ್ದುಕೊಳ್ಳುವ ದಿಸೆಯಲ್ಲಿ ಯೋಚಿತ ಕ್ರಮಗಳನ್ನುಕೈಗೊಳ್ಳುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳು

1876(2163): ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೋಲಾರ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಇದರಲ್ಲಿ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ತಾಲ್ಲೂಕುವಾರು ವಿವರಣೆ ನೀಡುವುದು)

ಆ. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಕಟ್ಟಡಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ. ಕೋಲಾರ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ 2361 ಇದರಲ್ಲಿ 1292 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿರುತ್ತದೆ.

ತಾಲ್ಲೂಕಿನ ಹೆಸರು	ಒಟ್ಟು ಅಂ.ಕೇ.. ಸಂಖ್ಯೆ	ಅಂಗನವಾಡಿ ಕೇಂದ್ರಗಳು	
		ಸ್ವಂತ ಕಟ್ಟಡ ಇರುವುದು	ಸ್ವಂತ ಕಟ್ಟಡ ಇಲ್ಲದಿರುವುದು
ಬಾಗೇಪಲ್ಲಿ	154	103	51
ಬಂಗಾರಪೇಟೆ	375	204	171
ಚಿಂತಾಮಣಿ	256	103	153
ಚಿಕ್ಕಬಳ್ಳಾಪುರ	168	88	80